# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ಜಾವಿದ್ ಅಹಮದ್ ಬಿನ್ ಲೇಟ್ ಗುಲಾಂ ರಸೂಲ್ ದೊಡ್ಡಕೌಲಂದೆ, ದೊಡ್ಡಕೌಲಂದೆ ಗ್ರಾಮ ಪಂಚಾಯಿತಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ, ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ರನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

**ಓದಲಾಗಿದೆ:**

1. ಅಪರ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ರವರ ಪತ್ರ ಸಂಖ್ಯೆ, ನಂ.ಇಎಲ್ಎನ್(2) ಸಿಆರ್ 28/2016–17 ದಿನಾಂಕ 10–11–2016
2. ಸರ್ಕಾರದ ಪತ್ರ ಸಂಖ್ಯೆ: ಸಂ.ಗ್ರಾಅಪ:1137:ಗ್ರಾಪಂಅ:2016, ದಿನಾಂಕ:28.01.2017, ರ ಕಾರಣ ಕೇಳುವ ನೋಟಿಸ್ಸು.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರಲ್ಲಿ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ರವರು ಶ್ರೀ ಜಾವಿದ್ ಅಹಮದ್ ಬಿನ್ ಲೇಟ್ ಗುಲಾಂ ರಸೂಲ್ ದೊಡ್ಡಕೌಲಂದೆ, ಇವರು ಹಾಲಿ ದೊಡ್ಡಕೌಲಂದೆ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರಾಗಿರುತ್ತಾರೆಂದು ಸದರಿಯವರು ಸರ್ಕಾರ ಸೌಲಭ್ಯವನ್ನು ಅಕ್ರಮವಾಗಿ ಪಡೆಯುವ ದುರಾಲೋಚನೆ ಇಟ್ಟುಕೊಂಡು ತನ್ನ ಹೆಂಡತಿಯ ಹೆಸರಿನಲ್ಲಿ ಅಕ್ರಮವಾಗಿ ಹೆಚ್.ಪಿ. ಗ್ಯಾಸ್ ಮಾಡಿಸುವ ಸಲುವಾಗಿ ತಹಶೀಲ್ದಾರ್, ನಂಜನಗೂಡು ರವರ ಕಛೇರಿಯಿಂದ ಸುಳ್ಳು ಮರಣ ಪ್ರಮಾಣ ಪತ್ರವನ್ನು ಪಡೆದಿರುವುದರಿಂದ ಇವರ ವಿರುದ್ಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಕಲಂ 43–ಎ ರನ್ವಯ ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ಶ್ರೀ ಜಾವಿದ್ ಅಹಮದ್ ರವರು ನಂಜುಡೇಶ್ವರ ಗ್ಯಾಸ್ ಏಜೆನ್ಸಿಯಲ್ಲಿಯೂ ಗ್ಯಾಸ್ ಸಂಪರ್ಕವನ್ನು ಪಡೆದಿರುವುದಾಗಿ (ಬಳಕೆದಾರರ ಸಂಖ್ಯೆ:17148) ಪ್ರತಿ ಮಾಹೆ ರೀಫಿಲ್ ಸಿಲಿಂಡರುಗಳನ್ನು ಪಡೆಯುತ್ತಿರುವುದಾಗಿ, ಹಾಲಿ ಸಂಪರ್ಕ ಚಾಲ್ತಿಯಲ್ಲಿರುವುದೂ ಸಹ ಕಂಡು ಬಂದಿರುವುದಾಗಿ ತಿಳಿಸಿರುತ್ತಾರೆ. ಶ್ರೀಮತಿ ರಶಿದಾ ಬೇಗಂ ಕೋಂ ಜಾವಿದ್ ಅಹಮದ್ ರವರು ವಿಶಾಲ್ ಗ್ಯಾಸ್ ಎಜೆನ್ಸಿಯಿಂದ ಹಾಗೂ ಅವರ ಪತಿ ಜಾವಿದ್ ಅಹಮದ್ ರವರು ನಂಜುಡೇಶ್ವರ ಗ್ಯಾಸ್ ಎಜೆನ್ಸಿಯಿಂದ ಪ್ರತ್ಯೇಕವಾಗಿ ಗ್ಯಾಸ್ ಸಂಪರ್ಕ ಪಡೆದಿರುವುದು ದೃಢಪಟ್ಟಿರುವುದರಿಂದ ಶ್ರೀ ಜಾವಿದ್ ಅಹಮದ್ ಮತ್ತು ಅವರ ಪತ್ನಿ ಯವರು ಸರ್ಕಾರ ನೀಡುವ ಸಹಾಯಧನ ಪಡೆಯುವಲ್ಲಿ ನಕಲಿ ಮರಣ ದೃಢೀಕರಣ ಪತ್ರ ನೀಡಿ ಅಕ್ರಮ ಎಸಗಿರುವುದು ಕಂಡು ಬಂದಿರುವುದಾಗಿ ವರದಿಯನ್ನು ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಶ್ರೀ ಜಾವಿದ್ ಅಹಮದ್ ಬಿನ್ ಲೇಟ್ ಗುಲಾಂ ರಸೂಲ್ ದೊಡ್ಡಕೌಲಂದೆ, ಇವರು ಹಾಲಿ ದೊಡ್ಡಕೌಲಂದೆ ಗ್ರಾಮ ಪಂಚಾಯಿತಿ ತವರಿಗೆ ನಿಯಮಾನುಸಾರ ಕಾರಣ ಕೇಳುವ ನೋಟೀಸ್ಸನ್ನು ಜಾರಿ ಮಾಡಲಾಗಿರುತ್ತದೆ. ಕಾರಣ ಕೇಳುವ ನೋಟೀಸ್ಗೆ ಆಪಾದಿತರು ನಿಗದಿತ ಅವಧಿಯೊಳಗೆ ಖುದ್ದಾಗಿ ಅಥವಾ ಅನುಮತಿ ಪಡೆದು ವಕೀಲರ ಮೂಲಕ ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುವುದಿಲ್ಲ

ಮಾನ್ಯ ಪ್ರಧಾನ ಕಾರ್ಯದರ್ಶಿಯವರ ನ್ಯಾಯಾಲಯದಲ್ಲಿ ದಿನಾಂಕ:21.03.2017 ರಂದು ಅಪರ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಮೈಸೂರು ಜಿಲ್ಲೆ, ರವರು ಸಲ್ಲಿಸಿರುವ ವರದಿಯನ್ನು ಹಾಗೂ ಶ್ರೀ ಜಾವಿದ್ ಅಹಮದ್ ಬಿನ್ ಲೇಟ್ ಗುಲಾಂ ರಸೂಲ್ ದೊಡ್ಡಕೌಲಂದೆ, ಹಾಲಿ ಉಪಾಧ್ಯಕ್ಷರು, ರವರ ಈ ಪ್ರಕರಣದಲ್ಲಿನ ವಾಸ್ತವಾಂಶಗಳನ್ನು ಸರ್ಕಾರವು ಪರಿಶೀಲಿಸಿದ್ದು, ಸಂಬಂಧಪಟ್ಟ ದಾಖಲೆಗಳನ್ನು ಹಾಗೂ ವಿವರಗಳನ್ನು ಪರಿಶೀಲಿಸಿ, ಸದಸ್ಯರಿಗೆ ನೀಡಿರುವ ಕಾರಣ ಕೇಳುವ ನೋಟೀಸಿಗೆ ನಿಗದಿತ ಅವಧಿಯೊಳಗೆ ಖುದ್ದಾಗಿ ಅಥವಾ ಅನುಮತಿ ಪಡೆದು ವಕೀಲರ ಮೂಲಕ ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರದ ಹಿನ್ನೆಲೆಯಲ್ಲಿ ಅವರು ದುರ್ನಡತೆಯನ್ನು ಒಪ್ಪಿಕೊಂಡಿರುವುದು ಸ್ಪಷ್ಟವಾಗಿರುತ್ತದೆ ಆದ್ದರಿಂದ ಅವರ ಉಪಾಧ್ಯಕ್ಷ ಹಾಗೂ ಸದಸ್ಯ ಸ್ಥಾನದಿಂದ ತೆಗೆದು ಹಾಕಲು ನಿರ್ಣಯಿಸಿದೆ ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/1137/ಗ್ರಾಪಂಅ/2016**
**ಬೆಂಗಳೂರು, ದಿನಾಂಕ:- 17-10-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಜಾವಿದ್ ಅಹಮದ್ ಬಿನ್ ಲೇಟ್ ಗುಲಾಂ ರಸೂಲ್ ದೊಡ್ಡಕೌಲಂದೆ, ಉಪಾಧ್ಯಕ್ಷರು, ದೊಡ್ಡಕೌಲಂದೆ ಗ್ರಾಮ ಪಂಚಾಯಿತಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ, ಇವರು ದುರ್ನಡತೆ ಎಸಗಿರುವುದರಿಂದ ಸದರಿಯವರನ್ನು ದೊಡ್ಡಕೌಲಂದೆ ಗ್ರಾಮ ಪಂಚಾಯಿತಿ ಉಪಾಧ್ಯಕ್ಷ ಹಾಗೂ ಸದಸ್ಯ ಸ್ಥಾನದಿಂದ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ, ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಪ್ರತಿಯನ್ನು:-**

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮೈಸೂರು ಜಿಲ್ಲೆ.
2. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.
3. ಶ್ರೀ ಜಾವಿದ್ ಅಹಮದ್ ಬಿನ್ ಲೇಟ್ ಗುಲಾಂ ರಸೂಲ್ ದೊಡ್ಡಕೌಲಂದೆ, ದೊಡ್ಡಕೌಲಂದೆ ಗ್ರಾಮ ಪಂಚಾಯಿತಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.
4. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ದೊಡ್ಡಕೌಲಂದೆ ಗ್ರಾಮ ಪಂಚಾಯಿತಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.
5. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.
6. ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.